ಎಂವಿಸಿ.122/2023
PW-1

**ಸಾಕ್ಷಿಯನ್ನು ದಿನಾಂಕ 21-02-2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀಸವಾಲು-3 ನೇ ಎದುರುದಾರರ ಪರ ಶ್ರೀ ಬಿ.ಎಸ್.ಎಲ್ ವಕೀಲರಿಂದಃ**

ನನ್ನ ಕಾರ್ ನಂಬರ್ KA-51-MC-7168. ನಾನು ಸದರಿ ಕಾರಿನ ಮಾಲೀಕ ಎಂದು ತೋರಿಸಲು ನಾನು R.C ಯನ್ನು ಹಾಜರು ಮಾಡಿದ್ದೇನೆ. ಸಾಕ್ಷಿಗೆ ನ್ಯಾಯಾಲಯದ ಎದುರು ಇರುವ ಕಡತವನ್ನು ತೋರಿಸಲಾಗಿ ಅದರಲ್ಲಿ ಯಾವುದೇ ದಾಖಲೆ ಇಲ್ಲ ಎಂದು ನುಡಿದಿರುತ್ತಾರೆ. ಅದು 2011 ರ ಮಾಡೆಲ್ ನ ಕಾರ್ ಆಗಿತ್ತು. ನಾನು ಮಾರುತಿ ಇನ್ಸೂರೆನ್ಸ ಕಂಪನಿಯಲ್ಲಿ ಪಾಲಿಸಿ ತೆಗೆದುಕೊಂಡಿದ್ದೇನೆ. ಅಪಘಾತ ಆಗುವ ಸಂದರ್ಭದಲ್ಲಿ ನನ್ನ ಕಾರಿಗೆ ಎಷ್ಟು ಬೆಲೆ ಬಾಳುತ್ತದೆ ಎಂದು ಇನ್ಸೂರೆನ್ಸ ಕಂಪನಿಗೆ ಮಾಹಿತಿ ಕೊಟ್ಟು ಪಾಲಿಸಿ ತೆಗೆದುಕೊಂಡಿದ್ದೇನೆ ಎಂದರೆ ಸಾಕ್ಷಿ ನಿಖರವಾದ ಬೆಲೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅಪಘಾತ ಆದ ನಂತರ ನಾನು ನನ್ನ ಇನ್ಸೂರೆನ್ಸ ಕಂಪನಿಗೆ ಮಾಹಿತಿ ನೀಡಿದ್ದೆ. ನಾನು ಮಾಹಿತಿ ನೀಡಿದ ನಂತರ ಇನ್ಸೂರೆನ್ಸ ಕಂಪನಿಯವರು ಸರ್ವೆ ಮಾಡಲು ಒಬ್ಬ ವ್ಯಕ್ತಿಯನ್ನು ಕಳುಹಿಸಿದ್ದರು ಎಂದರೆ ಸರಿ. ಸದರಿ ವ್ಯಕ್ತಿ ವಾಹನಕ್ಕೆ ಎಷ್ಟು ಜಖಂ ಆಗಿದೆ ಎಂದು ಇನ್ಸೂರೆನ್ಸ ಕಂಪನಿಗೆ ತಿಳಿಸಿದ್ದಾರೆ ಎಂದರೆ ಸರಿ. ಸದರಿ ಮಾಹಿತಿಯ ಮೇಲೆ ನನ್ನ ಕಾರನ್ನು ರಿಪೇರಿ ಮಾಡಿದ್ದಾರೆ ಎಂದರೆ ಸರಿ. ಸದರಿ ರಿಪೇರಿಯ ಖರ್ಚನ್ನು ನನ್ನ ಇನ್ಸೂರೆನ್ಸ ಕಂಪನಿಯವರು ಕೊಟ್ಟಿದ್ದಾರೆ ಎಂದರೆ ಸಾಕ್ಷಿ ನಾನು ನೀಡಿದ್ದೇನ ೆಎಂದು ನುಡಿಯುತ್ತಾರೆ. ನನ್ನ ಇನ್ಸೂರೆನ್ಸ ಕಂಪನಿಯವರು 40 ಶೇಡಕದಷ್ಟು ಹಣವನ್ನು ಕೊಟ್ಟಿದ್ದಾರೆ. ಇನ್ಸೂರೆನ್ಸ ಕಂಪನಿಯವರು ಹಣ ಪಾವತಿ ಮಾಡುವ ಸಂದರ್ಭದಲ್ಲಿ ಸಂಪೂರ್ಣ ಹಣ ಪಾವತಿ ಆಗಿದೆ ಎಂದು ನಾನು ವೋಚರ್ ಗೆ ಸಹಿ ಹಾಕಿ ನೀಡಿದ್ದೇನೆ. ನನ್ನ ಕಾರ್ ರಿಪೇರಿಯ ಸಂಪೂರ್ಣ ಹಣವನ್ನು ನಾನು ಪಡೆದುಕೊಂಡ ಕಾರಣ 3 ನೇ ಎದುರುದಾರರು ಯಾವುದೇ ಹಣವನ್ನು ಕೊಡಲು ಬದ್ದರಲ್ಲ ಎಂದರೆ ಸರಿಯಲ್ಲ.

ನಿಪಿ-8 ರ ಒಂದು ಪ್ರತಿಯನ್ನು ನಾನು ಇನ್ಸೂರೆನ್ಸ ಕಂಪನಿಗೆ ನೀಡಿದ್ದೇನೆ. ನಾನು ಈಗಾಗಲೇ ಸಂಪೂರ್ಣ ಹಣವನ್ನು ಪಡೆದುಕೊಂಡ ಕಾರಣ ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಬಂದು ಪರಿಹಾರಕ್ಕಾಗಿ ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ.

**5 ನೇ ಎದುರುದಾರರ ಪರ ವಕೀಲರು ಪಾಟೀಸವಾಲಿಗೆ ಕಾಲಾವಕಾಶ ಕೇಳಿದ್ದು, ಕಾಲಾವಕಾಶ ನೀಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx

1 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು,
ಕೊಡಗು-ಮಡಿಕೇರಿ.